# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1375<br>
ಸದಸ್ಯರ ಹೆಸರು : ಶ್ರೀ ಡಾ.ಚಂದ್ರಶೇಖರ ಬಸವರಾಜ ಪಾಟೀಲ್<br>
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು<br>
ಉತ್ತರಿಸುವ ದಿನಾಂಕ : 19-03-2025

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ತುಮಕೂರು ಜಿಲ್ಲೆ, ಸಿರಾ ತಾಲ್ಲೂಕು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಬಸ್ ನಿಲ್ದಾಣದಿಂದ ಗ್ರಾಮಗಳ ಮಾರ್ಗವಾಗಿ ಹಿರಿಯೂರು ತಾಲ್ಲೂಕಿನ ಧರ್ಮಾಪುರ ಗ್ರಾಮಕ್ಕೆ ಸಂಚರಿಸುತ್ತಿರುವ ಸರ್ಕಾರಿ ಬಸ್‌ಗಳು ದಿನಕ್ಕೆ ಎಷ್ಟು ಬಾರಿ ಸಂಚರಿಸಲಾಗುತ್ತಿರುತ್ತದೆ:<br>(ನಿಗಧಿಪಡಿಸಿರುವ ಸಮಯವಾರು ವಿವರ ಒದಗಿಸುವುದು)</td><td>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ವ್ಯಾಪ್ತಿಯ ಸಿರಾ ಬಸ್ ನಿಲ್ದಾಣದಿಂದ ಧರ್ಮಾಪುರಕ್ಕೆ ಪ್ರತಿ ದಿನ ಒಟ್ಟು 18 ದುಂಡು ಸುತ್ತುವಳಿಗಳು ಆಚರಣೆಯಲ್ಲಿ ಇರುತ್ತದೆ.<br><br>ಶಿರಾ ಬಸ್ ನಿಲ್ದಾಣದಿಂದ ನಿರ್ಗಮನ ಸಮಯದ ವಿವರಗಳು ಕೆಳಕಂಡಂತಿವೆ.
<table>
<tr><th colspan="4">ಸಮಯ</th></tr>
<tr><td>6:30,<br>7:00,<br>7:15,<br>7:30,</td><td>7:45, 8:00,<br>9:00,<br>10:00</td><td>11:05,<br>11:45,<br>13:00, 13:45<br>14:30</td><td>15:20, 16:00,<br>17:45, 19:15,<br>20:30</td></tr>
</table></td></tr>
<tr><td>ಆ.</td><td>ಸದರಿ, ಮಾರ್ಗದಲ್ಲಿ ಸಂಚರಿಸುತ್ತಿರುವ ಕೆ.ಎಸ್.ಆರ್.ಟಿ.ಸಿ ಬಸ್‌ಗಳು ನಿಗದಿತ ಸಮಯಕ್ಕೆ ಸಂಚರಿಸದಿರುವುದರಿಂದ ಅಲ್ಲಿಯ ಶಾಲಾ ಕಾಲೇಜುಗಳ ಬಡ ವಿದ್ಯಾರ್ಥಿಗಳಿಗೆ, ಕೂಲಿ ಕಾರ್ಮಿಕರಿಗೆ ಹಾಗೂ ಗ್ರಾಮಸ್ಥರಿಗೆ ತುಂಬ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:</td><td rowspan="2">ಶಾಲಾ-ಕಾಲೇಜು ಹಾಗೂ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಸಿರಾ-ಧರ್ಮಾಪುರ ಮಾರ್ಗದ ಸಾರಿಗೆಗಳನ್ನು ನಿಗದಿತ ಸಮಯದಲ್ಲಿ ಕಾರ್ಯಾಚರಣೆ ಮಾಡಲಾಗುತ್ತಿದೆ ಹಾಗೂ ಈ ಸಂಬಂಧ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ.<br><br>ಪ್ರಸ್ತುತ ಕಲ್ಪಿಸಿರುವ ಸಾರಿಗೆ ಸೌಲಭ್ಯ ಸಾರ್ವಜನಿಕ ಪ್ರಯಾಣಿಕರ ಹಾಗೂ ವಿದ್ಯಾರ್ಥಿಗಳ ಬೇಡಿಕೆಗನುಗುಣವಾಗಿರುತ್ತದೆ.</td></tr>
<tr><td>ಇ.</td><td>ಬಂದಿದ್ದಲ್ಲಿ, ತ್ವರಿತವಾಗಿ ಹೆಚ್ಚುವರಿ ಬಸ್‌ಗಳನ್ನು ಸಮಯಕ್ಕೆ ಸರಿಯಾಗಿ ನಿಯೋಜಿಸಲು ಕ್ರಮ ವಹಿಸಲಾಗುವುದೇ:</td></tr>
<tr><td>ಈ.</td><td>ಧರ್ಮಾಪುರ ಕೆ.ಎಸ್.ಆರ್.ಟಿ.ಸಿ ಬಸ್‌ಗಳನ್ನು ನಿಲ್ಲಿಸಲು ನಿಲ್ದಾಣ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಯಾವಾಗ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣವನ್ನು ನಿರ್ಮಿಸಲಾಗುವುದು?<br>(ಸಂಪೂರ್ಣ ವಿವರ ನೀಡುವುದು)</td><td>ಹೌದು, ಸರ್ಕಾರದ ಗಮನಕ್ಕೆ ಬಂದಿದೆ.<br><br>ರಾಜ್ಯದ ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ದಿನಾಂಕ:31.03.2023ರವರೆಗೆ ಒಟ್ಟು ರೂ.4099.38 ಕೋಟಿಗಳ ಹೊಣೆಗಾರಿಕೆ ಬಾಕಿಯಿದ್ದು (ಸಾಲದ ಬಾಕಿ ಹೊಣೆಗಾರಿಕೆ ಒಳಗೊಂಡಂತೆ), ಸದರಿ ಬಾಕಿಯು ನಿಗಮಗಳ ತೀವ್ರ ಆರ್ಥಿಕ ಹಿನ್ನೆಡೆಗೆ ಕಾರಣವಾಗಿತ್ತು. ನಿಗಮಗಳು ಇಂಧನ ಕಂಪನಿಗಳಿಗೆ ಇಂಧನದ ವೆಚ್ಚವನ್ನು, ಭವಿಷ್ಯ ನಿಧಿ ಮತ್ತು ಸರಬರಾಜುದಾರರ/ಇತರೆ ಬಿಲ್ಲುಗಳನ್ನು ಪಾವತಿಸದೇ ಬಾಕಿಯಿರಿಸಿದ್ದರಿಂದ ನಿಗಮಗಳ ಮೇಲೆ ಆರ್ಥಿಕ ಹೊರೆ ಹೆಚ್ಚಾಗಿತ್ತು. ಈ ಕಾರಣಗಳಿಂದ ಧರ್ಮಾಪುರದಲ್ಲಿ ಬಸ್ ನಿಲ್ದಾಣ ನಿರ್ಮಿಸುವ ಬಗ್ಗೆ ಪ್ರಸ್ತುತ ಯಾವುದೇ ಪ್ರಸ್ತಾವನೆ ಇರುವುದಿಲ್ಲ.<br>ಆರ್ಥಿಕ ಲಭ್ಯತೆಯನುಸಾರ ಮುಂದಿನ ದಿನಗಳಲ್ಲಿ ಪರಿಶೀಲಿಸಲಾಗುವುದು.</td></tr>
</table>

ಸಂಖ್ಯೆ: ಟಿಡಿ 81 ಟಿಸಿಕ್ಯೂ 2025

**(ರಾಮಲಿಂಗಾರೆಡ್ಡಿ)**<br>
ಸಾರಿಗೆ ಮತ್ತು ಮುಜರಾಯಿ ಸಚಿವರು